(ಇ) (1) ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದವರಿಗೆ ಮಾಹೆಯಾನ ರೂ. 300·00 ಪೈಲ್ವಾನರು ಮತ್ತು ಕ್ರೀಡಾಪಟುಗಳು.

(2) ರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದವರಿಗೆ ಮಾಹೆಯಾನ ರೂ. 200·00.

(3) ರಾಜ್ಯಮಟ್ಟದಲ್ಲಿ ಭಾಗವಹಿಸಿದರೆ ಮಾಹೆಯಾನ ರೂ. 150·00.

(4) ಇತರರಿಗೆ ಮಾಹೆಯಾನ ರೂ. 100·00.

ಸಂಗೀತಗಾರರು ಮತ್ತು ಕಲಾವಿದರು ಮಾಹೆಯಾನ 100.00 ರೂಪಾಯಿ.

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ವಿಷಯ: ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿ ಹೆರಿಗೆ ಸಹಾಯಕ ಘಟಿಕದ ಮಂಜೂರಾತಿ.

ಪ್ರ. 258 (96) ಶ್ರೀ ಕಾಳಮರಿಗೌಡ (ಪಿರಿಯಾಪಟ್ಟಣ).—ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಪಿರಿಯಾಪಟ್ಟಣ ತಾಲ್ಲೂಕಿನ ಅತ್ತಿಗೋಡು ಗ್ರಾಮಕ್ಕೆ ಮೆಟರ್ನಿಟಿ ಆಕ್ಸಿಲರಿ ಮಂಜೂರಾಗಿದ್ದು ಯಾವಾಗ;

(ಆ) ಸದರಿ ಗ್ರಾಮದವರು ಆವರ ಭಾಗದ ಹಣವನ್ನು ಯಾವಾಗ ಸಲ್ಲಿಸಿದರು;

(ಇ) ಕಟ್ಟಡದ ಕೆಲಸ ಪೂರ್ತಿಯಾಗಿದೆಯೆ;

(ಈ) ಇಲ್ಲದಿದ್ದರೆ ನಿಧಾನವಾಗುವುದಕ್ಕೆ ಕಾರಣಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

(ಅ) ಸರ್ಕಾರಿ ಆದೇಶದ ನಂ. ಎಚ್.ಎಂ.ಎ. 460 ಪಿ.ಹೆಚ್.ಎಸ್. 77 ದಿ||13–12–1977 ರಂದು

(ಆ) ದಿನಾಂಕ 28–5–1977 ರಂದು ರೂ. 7.005

ದಿನಾಂಕ 10–3–1980 ರಂದು ರೂ. 10.000

ದಿನಾಂಕ 20–1–1981 ರಂದು ರೂ. 3,000.

(ಇ) ಇಲ್ಲ.

(ಈ) ಹೆರಿಗೆ ವಿಭಾಗವು ಮಂಜೂರಾದ ಸರ್ಕಾರಿ ಆಜ್ಞೆಯ ನಿಬಂಧನೆಗಳನ್ನು ಪೂರ್ತಿಮಾಡಲು ಗ್ರಾಮಸ್ಥರು ತಡ ಮಾಡಿದರು.

ಪ್ರಸೂತಿ ಗೃಹದ ವಿಸ್ತರಣೆಯನ್ನು ಮಂಜೂರು ಮಾಡುವಾಗ ಸರ್ಕಾರವು ಹಲವು ನಿಬಂಧನೆಗಳನ್ನು ಹಾಕಿತ್ತು. ಆದರೆ ಈ ನಿಬಂಧನೆಗಳನ್ನು ಸ್ಥಳೀಯ ಜನರು ಸಕಾಲದಲ್ಲಿ ಪೂರೈಸದಿದ್ದ ಕಾರಣ ಕಟ್ಟಡದ ಕೆಲಸದಲ್ಲಿ ವಿಳಂಬವಾಗಿದೆ.

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಶ್ರೀ ಎ. ಲಕ್ಷ್ಮೀನಾಗರ್.—ಲಿಖಿತ ಮೂಲಕ ಉತ್ತರಿಸುವ 17ನೇ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ವಿಷಯ: ರಾಜ್ಯದಲ್ಲಿ ಕೆಲಸ ಮಾಡುವ ಐ.ಎ.ಎಸ್. ಅಧಿಕಾರಿಗಳ ಬಗ್ಗೆ.

ಪ್ರ. 123 (113) ಶ್ರೀ ಕೆ. ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಒಟ್ಟು ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ;

(ಆ) ಕರ್ನಾಟಕ ರಾಜ್ಯದವರೇ ಆದ ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ;

(ಇ) ಬೇರೆ ಬೇರೆ ರಾಜ್ಯಗಳಿಂದ ಬಂದ ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ:

(ರಾಜ್ಯವಾರು ಅಂಕಿಗಳನ್ನು ಒದಗಿಸುವುದು).

(ಈ) ಹಿಂದಿನ ಐದು ವರ್ಷಗಳಲ್ಲಿ ಐ.ಎ.ಎಸ್.ಗೆ ನೇಮಕಗೊಂಡ ರಾಜ್ಯ ಅಧಿಕಾರಿಗಳ ಸಂಖ್ಯೆ;

(ಉ) ಐ.ಎ.ಎಸ್. ನೇಮಕಾತಿಗೆ ಶಿಫಾರಸು ಮಾಡಲು ಅನುಸರಿಸುವ ನೀತಿ ?

(ಊ) ಸರ್ಕಾರಿ ಉದ್ಯಮ ಮಂಡಳಿಗಳು ಹಾಗೂ ಸಂಸ್ಥೆಗಳಲ್ಲಿ ಅಧ್ಯಕ್ಷರುಗಳೆಂದು ಕೆಲಸ ಮಾಡುತ್ತಿರುವ ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ;

(ಋ) ಯಾವುದೇ ಐ.ಎ.ಎಸ್. ಅಧಿಕಾರಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವರೆ;

(ಋೂ) ಹಾಗಿದ್ದಲ್ಲಿ ವಿವರಗಳನ್ನು ಒದಗಿಸುವುದು.

ಶ್ರೀ ರಾಮಕೃಷ್ಣ ಹೆಗ್ಗಡೆ (ಮುಖ್ಯಮಂತ್ರಿಗಳು).—

(ಅ) 192.

(ಅ) 108.

(ಇ)

ಕರ್ನಾಟಕ	108
ಮಹಾರಾಷ್ಟ್ರ	3
ದಿಲ್ಲಿ	2
ತಮಿಳುನಾಡು	18
ಕೇರಳ	15
ಪಂಜಾಬ್	4
ಆಂಧ್ರ ಪ್ರದೇಶ	9
ಗೋವೆ	1
ಪಶ್ಚಿಮ ಬಂಗಾಳ	4
ಉತ್ತರ ಪ್ರದೇಶ	13
ಮಧ್ಯ ಪ್ರದೇಶ	2
ಒರಿಸ್ಸಾ	7
ಅಸ್ಸಾಮ್	2
ಬಿಹಾರ	1
ಹರಿಯಾಣ	1
ಮಣಿಪುರ	1
ರಾಜಸ್ಥಾನ	1
ಒಟ್ಟು	192

(ಈ) ಬಡ್ತಿಯ ಮೂಲಕ : 38
ಆಯ್ಕೆಯ ಮೂಲಕ : 5

(ಉ) ಬಡ್ತಿಗಾಗಿ (ಕೆ.ಎ.ಎಸ್. ಅಧಿಕಾರಿಗಳಿಗೆ)

1. ರಾಜ್ಯ ಸಿವಿಲ್ ಸೇವೆಯಲ್ಲಿ (ಕೆ.ಎ.ಎಸ್.) ವರ್ಗ–ಎ ಕಿರಿಯ ವೇತನ ಶ್ರೇಣಿ ಸ್ಥಿರಗೊಳಿಸಲ್ಪಟ್ಟಿರಬೇಕು.
2. ರಾಜ್ಯ ಸಿವಿಲ್ ಸೇವೆಯಲ್ಲಿ ಎಂಟು ವರ್ಷಗಳಿಗಿಂತಲೂ ಕಡಿಮೆ ಆಲ್ಲದಷ್ಟು ಅವಿಂಡ ಸೇವೆ ಸಲ್ಲಿಸಿರಬೇಕು.
3. 54 ವರ್ಷ ವಯಸ್ಸು ಪೂರ್ತಿ ಆಗಿರಬಾರದು.

ಆಯ್ಕೆಗಾಗಿ (ಕೆ.ಎ.ಎಸ್. ಆಲ್ಲದ ಅಧಿಕಾರಿಗಳಿಗೆ)

1. ವಿಶೇಷ ಅರ್ಹತೆ ಉಳ್ಳವರಾಗಿರಬೇಕು.
2. ಪ್ರಾಮುಖ್ಯತೆ ಮತ್ತು ಹೊಣೆಗಾರಿಕೆಗಳಲ್ಲಿ ಕೆ.ಎ.ಎಸ್. ವರ್ಗ–ಎ ಕಿರಿಯ ವೇತನ ಶ್ರೇಣಿಯ ಹುದ್ದೆಗೆ ಹೋಲಿಸಬಹುದಾದಂತಹ ರಾಜ್ಯದ ಯಾವುದೇ ಪತ್ರಾಕಿಂತ ಹುದ್ದೆಯಲ್ಲಿ ಎಂಟು ವರ್ಷಗಳಿಗಿಂತಲೂ ಕಡಿಮೆ ಆಲ್ಲದಷ್ಟು ಅವಿಚ್ಛಿನ್ನ ಸೇವೆಯನ್ನು ಸಲ್ಲಿಸಿರಬೇಕು.
3. ಇಂತಹ ವರ್ಗ–ಎ ಹುದ್ದೆಯಲ್ಲಿ ಖಾಯಂ ಆಗಿರಬೇಕು.
4. 54 ವರ್ಷ ವಯಸ್ಸು ಪೂರ್ತಿ ಆಗಿರಬೇಕು.

(ಊ) ಎಂಟು.

(ಋ) ಹೌದು.

(ಋ)1. ಶ್ರೀ ಕೆ. ಎಸ್. ಎನ್. ಮೂರ್ತಿ, ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ, ಅವರು ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ಯಮಗಳ ಸಂಸ್ಥೆಯ ಮಹಾ ನಿರ್ದೇಶಕರಾಗಿ ಹೆಚ್ಚಿನ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆ.

2. ಶ್ರೀ ಎ. ರವೀಂದ್ರ, ಕಾರ್ಯದರ್ಶಿ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ, ಅವರು ಕರ್ನಾಟಕ ರಾಜ್ಯ ಮುಖ್ಯ ಚುನಾವಣಾ ಅಧಿಕಾರಿಯೆಂದು ಹೆಚ್ಚಿನ ಕೆಲಸಗಳನ್ನು ಮಾಡುತ್ತಿದ್ದಾರೆ.

3. ಶ್ರೀ ವಿ. ಬಾಲಸುಬ್ರಮಣ್ಯನ್, ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರು, ವಿಜ್ಞಾನ ಹಾಗೂ ತಾಂತ್ರಿಕ ಇಲಾಖೆಯ ಕಾರ್ಯದರ್ಶಿಯಾಗಿ ಹೆಚ್ಚಿನ ಕೆಲಸಗಳನ್ನು ಮಾಡುತ್ತಿದ್ದಾರೆ.

4. ಶ್ರೀ ಡಿ. ಬಾಲಗೋಪಾಲನ್, ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಅವರು ಬೆಂಗಳೂರು ನಗರ ಕಾರ್ಪೊರೇಷನ್ನಿನ ಆಡಳಿತಾಧಿಕಾರಿಯಾಗಿ ಹೆಚ್ಚಿನ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆ.

ವಿಷಯ: ಜಿಲ್ಲಾ ಆರೋಗ್ಯ ಅಧಿಕಾರಿ ನೇಮಕ.

ಪ್ರ. 128 (55) ಶ್ರೀ ವಿ. ಧನಂಜಯ ಕುಮಾರ್ (ಮಂಗಳೂರು).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಆರೋಗ್ಯ ಅಧಿಕಾರಿಗಳ ಹುದ್ದೆಗಳ ಸಂಖ್ಯೆ ಎಷ್ಟು? ಹಾಗೂ ಎಷ್ಟು ಸಮಯದಿಂದ ಈ ಹುದ್ದೆಗಳು ಖಾಲಿ ಇವೆ;

(ಆ) ಈ ಹುದ್ದೆಗಳನ್ನು ಎಷ್ಟು ಅವಧಿಯಲ್ಲಿ ತುಂಬಲಾಗುವುದು;

(ಇ) ಈ ಹುದ್ದೆಗಳನ್ನು ಭರ್ತಿ ಮಾಡದೆ ಇರಲು ಕಾರಣಗಳೇನು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

(ಅ) ಒಂದು. 5-9-1982 ರಿಂದ ಖಾಲಿ ಇದೆ.

(ಆ) (ಇ) ಆರೋಗ್ಯ ಅಧಿಕಾರಿಗಳು ಹಾಕಿದ್ದ 8 ರಿಟ್ ಅರ್ಜಿ ಮತ್ತು 2 ರಿಟ್ ಅಪೀಲುಗಳಲ್ಲಿ ರಾಜ್ಯದ ಉಚ್ಚ ನ್ಯಾಯಾಲಯವು ಆರ್ಡರ್ ಮಾಡಿದ್ದು ಅದನ್ನನುಸರಿಸಿ ಆರೋಗ್ಯ ಇಲಾಖೆಯ ನಿರ್ದೇಶಕರಿಂದ ಪ್ರಸ್ತಾವನೆಯನ್ನು ಕೇಳಲಾಗಿದೆ. ಅದು ಬಂದ ಕೂಡಲೇ ಪರಿಶೀಲಿಸಿ ಮೇಲ್ಕಂಡ ಖಾಲಿ ಹುದ್ದೆಯನ್ನು ಭರ್ತಿ ಮಾಡಲಾಗುವುದು.

ವಿಷಯ: ಧಾರವಾಡ ಜಿಲ್ಲಾ ಬ್ಯಾಡಗಿ ಸರ್ಕಾರಿ ಆಸ್ಪತ್ರೆಯನ್ನು ವಿಸ್ತರಿಸುವುದು.

ಪ್ರ. 125 (54) ಶ್ರೀ ಪೆಗ್ಗಪ್ಪ ಲಮಾಣಿ (ಬ್ಯಾಡಗಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಧಾರವಾಡ ಜಿಲ್ಲಾ ಬ್ಯಾಡಗಿಯಲ್ಲಿ ಸರ್ಕಾರಿ ಆಸ್ಪತ್ರೆಯನ್ನು ವಿಸ್ತರಿಸುವ ಸಲಹೆಯೊಂದು ಸರ್ಕಾರದವರಲ್ಲಿದೆಯೇ;

(ಆ) ಹಾಗಿದ್ದಲ್ಲಿ ಎಷ್ಟು ಹಾಸಿಗೆಯ ಆಸ್ಪತ್ರೆಯನ್ನಾಗಿ ಮಾರ್ಪಡಿಸಲಾಗುವುದು ಮತ್ತು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

ಪ್ರ. 126 (66) ಶ್ರೀ ಕೆ. ಚೆನ್ನಬಸವನಗೌಡ (ಕೂಡ್ಲಿಗಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ವಿಷಯ: ಎಲ್ಲಾ ಕಡೆಗಳಲ್ಲಿಯೂ ಹೆಚ್ಚುತ್ತಿರುವ ಅಗ್ನಿ ದುರಂತಗಳನ್ನು ತಡೆಗಟ್ಟಲು ಸರ್ಕಾರದವರು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ತೆರೆಯಲು ಕ್ರಮ ತೆಗೆದುಕೊಳ್ಳುತ್ತಿರುವರೇ?

ಶ್ರೀ ರಮೇಶ್ ಜಿಗಜಿನ್ನಿ (ಮಾನ್ಯ ಗೃಹಖಾತೆಯ ರಾಜ್ಯ ಸಚಿವರು).—

ಅಗ್ನಿಶಾಮಕ ಠಾಣೆಗಳನ್ನು ಆದ್ಯತಾನುಸಾರವಾಗಿ ಜಿಲ್ಲಾ ಕೇಂದ್ರಗಳಲ್ಲಿ ಮೊದಲನೆಯ ಹಂತದಲ್ಲಿಯೂ ಮತ್ತು ಉಪವಿಭಾಗ ಕೇಂದ್ರಗಳಲ್ಲಿ ಎರಡನೆಯ ಹಂತದಲ್ಲಿಯೂ ಸ್ಥಾಪಿಸಲಾಗುವುದು. ಮೂರನೆಯ ಹಂತದಲ್ಲಿ ಹಾಲಿ ಇರುವ ಸ್ಥಳೀಯ ಸಂಸ್ಥೆಗಳ ಅಗ್ನಿಶಾಮಕ ಠಾಣೆಗಳನ್ನು ಸರ್ಕಾರವು ವಹಿಸಿಕೊಳ್ಳುವುದು. ರಾಜ್ಯದಲ್ಲಿ ಸ್ಥಾಪಿಸಲಾಗುವ ಅಗ್ನಿಶಾಮಕ ಠಾಣೆಗಳ ಬಗ್ಗೆ ಇದು ಸರ್ಕಾರದ ಸಾಮಾನ್ಯ ನೀತಿಯಾಗಿದೆ. ಅಗ್ನಿಶಾಮಕ ಠಾಣೆಗಳನ್ನು ಎಲ್ಲೇ ಸ್ಥಾಪಿಸಲಿ ಅವು ಅಲ್ಲಿಂದ 40 ಕಿ.ಮೀ. ಘಾಸಲೆಯಲ್ಲಿ ಬರುವ ಅಗ್ನಿಶಾಮಕ ಕರೆಗಳನ್ನು ನಿರ್ವಹಿಸುತ್ತವೆ. ಒಂದು ಅಗ್ನಿಶಾಮಕ ಠಾಣೆಗೆ ತಗಲುವ ಆವರ್ತ ವೆಚ್ಚ ರೂ. 31,00,000·00 ಮತ್ತು ಆವರ್ತ ವೆಚ್ಚ ರೂ. 4,00,000·00 ಅಗ್ನಿಶಾಮಕ ಠಾಣೆಗೆ ತಗಲುವ ಭಾರಿ ವೆಚ್ಚದಿಂದ ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿಯೂ ಅಗ್ನಿಶಾಮಕ ಠಾಣೆಯನ್ನು ತೆರೆಯಲು ಸಾಧ್ಯವಾಗಿಲ್ಲ.

ವಿಷಯ: ಬೆಲೆ ಏರಿಕೆಯ ನಿಯಂತ್ರಣದ ಬಗ್ಗೆ ಸಂಪುಟದ ಉಪಸಮಿತಿ.

ಪ್ರ. 100 ಶ್ರೀ ಕೆ. ಪಚ್. ರಂಗನಾಥ್ (ಹಿರಿಯೂರು).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಆಹಾರಧಾನ್ಯಗಳ ಬೆಲೆ ಏರಿಕೆಯ ನಿಯಂತ್ರಣದ ಬಗ್ಗೆ ಸಲಹೆ ಮಾಡಲು ಸಂಪುಟದ ಉಪಸಮಿತಿ ರಚಿಸಲ್ಪಟ್ಟಿತ್ತೆ?